<u>**ಕರ್ನಾಟಕ ವಿಧಾನ ಪರಿಷತ್ತು**</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 689 (724) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 10.03.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಕೈಗಾರಿಕೆ ಇಲಾಖೆಯ ವತಿಯಿಂದ ರೂಪಿಸಲಾಗಿರುವ ಕೈಗಾರಿಕಾ ನೀತಿ 2025-30ರಡಿ ಫೆಬ್ರುವರಿ-2025ರಿಂದ ಇಲ್ಲಿಯವರೆಗೆ ಎಷ್ಟು ಹೂಡಿಕೆ ಆಕರ್ಷಿಸಲಾಗಿದೆ; (ವಿವರ ನೀಡುವುದು); | ಫೆಬ್ರುವರಿ - 2025 ರಿಂದ ಇಲ್ಲಿಯವರೆಗೆ (ಫೆಬ್ರುವರಿ - 2026ರ ಅಂತ್ಯದವರೆಗೆ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಒಟ್ಟು 516 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ರೂ.73863.99 ಕೋಟಿ ಬಂಡವಾಳ ಹೂಡಿಕೆ ಮತ್ತು 147738 ಉದ್ಯೋಗಾವಕಾಶ ನಿರೀಕ್ಷಿಸಲಾಗಿದೆ. |
| ಆ | ಯಾವ ಯಾವ ರಾಜ್ಯ/ ರಾಷ್ಟ್ರಗಳಿಂದ ಹೂಡಿಕೆ ಆಕರ್ಷಿಸಲಾಗಿದೆ ಮತ್ತು ಎಷ್ಟು ಮೊತ್ತ ಆಕರ್ಷಿಸಲಾಗಿದೆ; | ಥೈಪೆ, ದಕ್ಷಿಣ ಕೊರಿಯ ದೇಶಗಳು ಹಾಗೂ ಹರಿಯಾಣ, ಮಹಾರಾಷ್ಟ್ರ, ದೆಹಲಿ, ಉತ್ತರಪ್ರದೇಶ, ಗುಜರಾತ್, ಗೋವಾ, ತೆಲಂಗಾಣ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ಮತ್ತು ಕೇರಳ ರಾಜ್ಯಗಳಿಂದ ಹೂಡಿಕೆ ಆಕರ್ಷಿಸಲಾಗಿದೆ. |
| ಇ | ಸದರಿ ನೀತಿಯಡಿ ಫೆಬ್ರುವರಿ-2025ರಿಂದ ಇಲ್ಲಿಯವರೆಗೆ ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ; | ಫೆಬ್ರುವರಿ-2025ರಿಂದ ಅನುಮೋದನೆ ಪಡೆದ 516 ಯೋಜನೆಗಳು ಬೃಹತ್ ಕೈಗಾರಿಕೆಗಳಾಗಿರುವುದರಿಂದ, ಅನುಷ್ಠಾನಕ್ಕಾಗಿ ಕನಿಷ್ಠ 3-5 ವರ್ಷಗಳು ಬೇಕಾಗುತ್ತದೆ. ಯೋಜನೆಗಳು ಅನುಷ್ಠಾನವಾದ ನಂತರ ಉದ್ಯೋಗ ಸೃಜನೆಯಾಗುತ್ತವೆ. |
| ಈ | ಕೈಗಾರಿಕಾ ನೀತಿ 2025-30 ರಡಿ ಇಲ್ಲಿಯವರೆಗೆ ಎಷ್ಟು ನವೋದ್ಯಮಗಳನ್ನು ಸ್ಥಾಪಿಸಲಾಗಿದೆ ಮತ್ತು ಬೆಂಗಳೂರನ್ನು ಹೊರತುಪಡಿಸಿ ಇತರೇ ಜಿಲ್ಲೆಗಳಲ್ಲಿ ಎಷ್ಟು ನವೋದ್ಯಮಗಳು ಪ್ರಾರಂಭಗೊಂಡಿವೆ ಎಂಬುದರ ಬಗ್ಗೆ ಮಾಹಿತಿ ನೀಡುವುದು; | ನವೋದ್ಯಮಗಳಿಗೆ (Startups) IT/BT ಇಲಾಖೆಯಲ್ಲಿ ಪ್ರತ್ಯೇಕ Startup ಪಾಲಿಸಿ ಇದ್ದು, ಅದರಡಿಯಲ್ಲಿ ನವೋದ್ಯಮಗಳು ಬರುತ್ತಿದ್ದು, ಕೈಗಾರಿಕಾ ನೀತಿ 2025-30 ರಡಿ ಬರುವುದಿಲ್ಲ. |
| ಉ | ಈ ನೀತಿಯಡಿ ಹೊಸ ಹೂಡಿಕೆ ವಲಯಗಳನ್ನು ಯೋಜಿಸಲಾಗಿದೆಯೇ; ಇದ್ದಲ್ಲಿ, ಎಷ್ಟು ಹೂಡಿಕೆ ವಲಯಗಳನ್ನು ಪ್ರಾರಂಭಿಸಲಾಗುವುದು ಮತ್ತು ಈ ಯೋಜನೆಗೆ ಬೇಕಾಗಿರುವ ಒಟ್ಟು ಜಮೀನು ಎಷ್ಟು? | |

ಸಿಐ 40 ಎಸ್‌ಪಿಐ 2026

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು